ಸಿಗುತ್ತಿಲ್ಲ. ಕಾಮಗಾರಿ ಕೆಲಸಗಳು ಕೂಡ ಆಗುತ್ತಿಲ್ಲ. ಅಲ್ಲಿನ ಶಾಸಕರಿಗೆ ಆ ಕ್ಷೇತ್ರಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲ.ಆದ್ದರಿಂದ ಅಲ್ಲಿಗೆ ತಕ್ಷಣ ಇಂದಿರಾ ಆವಾಸ್ ಮನೆಗಳು ಇರಬಹುದು, ಅಂಬೇಡ್ಕರ್ ಮನೆ ಇರಬಹುದು ಆಶ್ರಯ ಯೋಜನೆಯಡಿಯಲ್ಲಿ ಕೊಡುವ ಮನೆಗಳು ಇರಬಹುದು, ಇವುಗಳನ್ನು ಮಂಜೂರು ಮಾಡಿ ತಕ್ಷಣ ಅಲ್ಲಿಗೆ ಬೇಕಾದ ಕಾಮಗಾರಿ ಕೆಲಸಗಳಿಗೆ ಅನುದಾನ ಬಿಡುಗಡೆ ಮಾಡಿ ಅಲ್ಲಿ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 29-7-97ರ ಪತ್ರದಲ್ಲಿ ತಾವು ಪ್ರಸ್ತಾಪಿಸಿದಂತೆ ಹಿಂದೆ ಈ ಎಲ್ಲಾ ಗ್ರಾಮಗಳಲ್ಲಿ 10 ಸಾವಿರ 15 ಸಾವಿರ ಜನ ಸಂಖ್ಯೆ ಇದಿದ್ದರಿಂದ ಇವುಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮಾಡಬೇಕೆಂದು ನಿರ್ಧಾರ ಮಾಡಲಾಗಿತ್ತು. ಆದಾದ ಮೇಲೆ ನೀವು ಪತ್ರ ವ್ಯವಹಾರ ಮಾಡಿ ಆ ನಂತರ ಪುನರ್ ಪರಿಶೀಲನೆ ಮಾಡಿ ಈ ಗ್ರಾಮೀಣ ಪ್ರದೇಶಗಳನ್ನು ಗ್ರಾಮ ಪಂಚಾಯತಿಗಳನ್ನಾಗಿ ಮಾಡಿ ಕೊಡಬೇಕೆಂದು ತಾವು ಹೇಳಿದ ಮೇಲೆ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ 1-8-97ರಂದು ಅವುಗಳನ್ನು ಗ್ರಾಮ ಪಂಚಾಯತಿಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ಅನುಮೋದನೆ ಕೊಟ್ಟಿದ್ದೇನೆ. ಇದನ್ನು ನಗರ ಪಂಚಾಯಿತಿ ಮತ್ತು ಪಟ್ಟಣ ಪಂಚಾಯತಿಗಳೆಂದು ಮಾಡಿದ ಕಾರಣಕ್ಕಾಗಿಯೇ ಈ ತೊಂದರೆ ಆಗಿತ್ತು. ದಿನಾಂಕ 1-8-97ರಂದು ನಾನು ಅನುಮೋದನೆ ಮಾಡಿರುವುದರಿಂದ ಜಿಲ್ಲಾಧಿಕಾರಿಗಳು ಕರ್ನಾಟಕ ಪಂಚಾಯತ್ ಕಾಯ್ದೆ ಮೇರೆಗೆ ಮುಂದಿನ ಕ್ರಮ ಕೈಗೊಳ್ಳುತ್ತಾರೆ. ಆಗ ಅವರಿಗೆ ಬೇಕಾದ ಎಲ್ಲಾ ಸೌಲತ್ತುಗಳು ಸಿಗುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಮಂಜುನಾಥ ಸಿ ಕುನ್ನೂರ್ : ಮಾನ್ಯ ಅಧ್ಯಕ್ಷರೇ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ಇದ್ದೇ ರೀತಿಯಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿಯೂ ಸಹ ಬಹಳ ಹಳ್ಳಿಗಳು ಇವೆ. ನಗರ ಪ್ರದೇಶಕ್ಕೂ ಸೇರಿಲ್ಲ ಪಟ್ಟಣಪ್ರದೇಶಕ್ಕೂ ಸೇರಿಲ್ಲ. ಆ ತರಹ ಯಾವುದಕ್ಕಾದರೂ ಸೇರಿಸುವಂತಹ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ರುಕ್ಮಯ ಪೂಜಾರಿಯವರು ಪತ್ರ ಬರೆದು ಕಳುಹಿಸಿದಂತೆ ತಾವು ಬರೆದು ಕಳುಹಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕ್ ಬಳಿ ಮೋಟೆ ಬೆನ್ನೂರು ಹತ್ತಿರ ಲಾರಿ ಅಪಘಾತ 22 ಜನರ ಸಾವು

ಶ್ರೀ ಮಂಜುನಾಥ್ ಸಿ. ಕುನ್ನೂರು (ಧಾರವಾಡ) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕು ಬಳಿ ಮೋಟೆಬೆನ್ನೂರು ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿನ್ನೆಯ ದಿವಸ ಲಾರಿ ಪಲ್ಟಿಯಾಗಿ ಬಿದ್ದು ಸುಮಾರು 40 ಮಂದಿಗೆ ಗಾಯವಾಗಿ 22 ಜನ ಸ್ಥಳದಲ್ಲಿಯೇ ಸತ್ತಿದ್ದಾರೆ ಎನ್ನತಕ್ಕಂಥಾದ್ದು

ಇವತ್ತಿನ ಎಲ್ಲಾ ಪತ್ರಿಕೆಗಳಲ್ಲಿ ವರದಿ ಆಗಿದೆ. ಅದರಲ್ಲೂ ವಿಶೇಷವಾಗಿ ಆ ಮೊಟೆ ಬೆನ್ನೂರಿನ ಹತ್ತಿರ ಮೇಲಿಂದ ಮೇಲೆ ಅನೇಕ ಅಪಘಾತಗಳು ಆಗುತ್ತಿವೆ. ನಿನ್ನೆಯ ದಿವಸ ಸತ್ತಂತಹ ಈ ಗಾಯಾಳುಗಳಿಗೆ ರಕ್ತವನ್ನು ಕೊಡಲಿಕ್ಕೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ವ್ಯವಸ್ಥೆ ಇಲ್ಲ ಎನ್ನುವ ವಿಷಯವನ್ನು ಅಲ್ಲಿನ ಡಾಕ್ಟರ್ಸ್ ಮಾನ್ಯ ಸಚಿವರ ಮುಂದೆ ಹೇಳಿದ್ದಾರೆ ಎನ್ನುವ ವಿಷಯ ಪತ್ರಿಕೆಗಳಲ್ಲಿ ವರದಿ ಆಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ತಮ್ಮ ಶೋಕವನ್ನು ವ್ಯಕ್ತಪಡಿಸಿದ್ದಾರೆ. ಸತ್ತಂತಹ ಕುಟುಂಬದವರಿಗೆ ಸರ್ಕಾರ ಏನು ಪರಿಹಾರ ಕೊಡಬೇಕು ಎನ್ನುವುದನ್ನು ತೀರ್ಮಾನ ಮಾಡಿದ್ದಾರೆ? ಮತ್ತು ಗಾಯಾಳುಗಳಿಗೆ ಏನು ಪರಿಹಾರ ಧನವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ? ಮತ್ತು ರಕ್ತವನ್ನು ಕಿಮ್ಸ್ ಆಸ್ಪತ್ರೆಗೆ ಸರ್ಕಾರದಿಂದ ಒದಗಿಸುವ ವ್ಯವಸ್ಥೆಯನ್ನು ಮಾಡುತ್ತಾರಾ ಅಥವಾ ಇಲ್ಲವೇ ಎನ್ನುವ ಬಗ್ಗೆ ವಿವರವಾದ ವರದಿಯನ್ನು ಕೊಡಬೇಕು ಎಂದು ನಾನು ತಮ್ಮ ಮುಖೇನ ಸರ್ಕಾರವನ್ನು ಕೇಳುತ್ತೇನೆ. ಇನ್ನೊಂದು ವಿಚಾರ ಈ ರೀತಿಯಾಗಿ ಲಾರಿಯಲ್ಲಿ ಸುಮಾರು 60-70 ಜನ ಹೋಗಲಿಕ್ಕೆ ಈ ಸಾರಿಗೆ ವ್ಯವಸ್ಥೆಯ ಅಸ್ಥವ್ಯಸ್ಥೆಯೇ ಕಾರಣ ಎನ್ನುವುದನ್ನು ನಾನು ಹೇಳಬೇಕಾಗಿದೆ. ಸತ್ತವರ ಕುಟುಂಬದವರಿಗೆ ಕೂಡಲೇ ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ ನಿನ್ನೆ ನಡೆದಿರತಕ್ಕಂಥ ದುರ್ಘಟನೆ ಬಗ್ಗೆ ನಾವೆಲ್ಲಾ ಸಂತಾಪವನ್ನು ವ್ಯಕ್ತಪಡಿಸಿದ್ದೇವೆ. 20 ಜನ ಸತ್ತಿದ್ದಾರೆ. 37 ಜನಕ್ಕೆ ಗಾಯಗಳು ಆಗಿದೆ. ಇದರ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಎಸ್. ಪಾಟೀಲರು ಸ್ಥಳಕ್ಕೆ ಭೇಟಿಕೊಟ್ಟು ಬಂದಿದ್ದಾರೆ. ಅಲ್ಲಿ ಗಾಯಾಳುಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಕೊಡುವ ದೃಷ್ಟಿಯಿಂದ ಎನೆಲ್ಲಾ ಪ್ರಯತ್ನ ಮಾಡಬಹುದೋ ಅದನ್ನೆಲ್ಲಾ ಮಾಡಿದ್ದಾರೆ. ಇವತ್ತು ಸರ್ಕಾರದ ನಿಯಮಾವಳಿಗಳ ಪ್ರಕಾರವಾಗಿ ಯಾರು ಸತ್ತಿದ್ದಾರೆ ಅವರ ಕುಟುಂಬದವರಿಗೆ ಪರಿಹಾರ ಕೊಡಲು ನಮ್ಮ ಕಾನೂನಿನಲ್ಲಿ ಅವಕಾಶ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 6 ಸಾವಿರ ಜನ ಪ್ರತಿ ವರ್ಷ ಅಪಘಾತಗಳಲ್ಲಿ ಸಾಯುತ್ತಿದ್ದಾರೆ. ಇದೊಂದು ಅತ್ಯಂತ ಆತಂಕಕರವಾದ ವಿಚಾರ ಎನ್ನುವುದನ್ನು ಸರ್ಕಾರ ಸಹ ಒಪ್ಪುತ್ತದೆ. ಇದನ್ನು ಕೇವಲ ಒಂದು ಇಲಾಖೆ ಮಾಡತಕ್ಕಂಥ ಕೆಲಸ ಅಲ್ಲ. ಸರ್ಕಾರದ ಮೋಟಾರ್ ವಾಹನಗಳ ಇಲಾಖೆ, ಪೋಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ, ಎಲ್ಲಾ ಸೇರಿ ಈ ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಿಗಳು, ಡಿ.ಜಿ.ಪಿ ಯವರು, ಗೃಹ ಇಲಾಖಾ ಕಾರ್ಯದರ್ಶಿಗಳು, ಸಾರಿಗೆ ಆಯುಕ್ತರು, ಲೋಕೋಪಯೋಗಿ ಇಲಾಖಾ ಕಾರ್ಯದರ್ಶಿಗಳು, ಎಲ್ಲರನ್ನು ಸೇರಿಸಿ ರೋಡ್ ಸೇಪ್ಟ್ ಕಮಿಟಿ ಅಂತ ಮಾಡಿದ್ದಾರೆ. ಅದಕ್ಕೆ ನಾನೇ ಅಧ್ಯಕ್ಷನಾಗಿದ್ದೇನೆ. ರಾಜ್ಯದಲ್ಲಿ ಈ ರೀತಿಯ ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾವು ಆಗಾಗ ಸಭೆ ಸೇರಿ, ಎರಡು ತಿಂಗಳಿಗೆ ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರಿ, ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ನಿನ್ನೆ ನಡೆದಿರತಕ್ಕಂಥ ಘಟನೆ ಬಗ್ಗೆ ಸ್ಥಳಕ್ಕೆ ಭೇಟಿ ಕೊಟ್ಟಿರತಕ್ಕಂಥ ಮಾನ್ಯ ಎಸ್.ಎಸ್. ಪಾಟೀಲ್ ಅವರು ಎರಡು ಮಾತುಗಳನ್ನು ಹೇಳುತ್ತಾರೆ. ನಾನು ಇಷ್ಟೇ ಹೇಳುತ್ತೇನೆ ಈ ಮೋಟಾರ್ ವಾಹನಗಳ ಕ್ಲೈಮ್ಸ್

ಟ್ರಿಬ್ಯುನಲ್ ಏನು ಇದೆ, ಆ ಟ್ರಿಬ್ಯುನಲ್‌ನಲ್ಲಿ ಇದು ಕೇಸ್ ಆಗುತ್ತದೆ. ಪೋಲೀಸಿನವರು ಸಹ ಕೇಸನ್ನು ಬುಕ್ಕು ಮಾಡುತ್ತಾರೆ. ಅದಾದ ನಂತರ ಪರಿಹಾರದ ಬಗ್ಗೆ ವಿಚಾರ ಮಾಡೋಣ. ಆದರೆ ಒಂದು ಮಾತನ್ನು ನಾನು ಸಹ ಒಪ್ಪುತ್ತೇನೆ. ಲಾರಿಗಳಲ್ಲಿ ಹೋಗತಕ್ಕಂಥಾದ್ದು ಕಾನೂನು ಪ್ರಕಾರ ಈಗಾಗಲೇ ನಿರ್ಬಂಧ ಮಾಡಿದ್ದೇವೆ. ಬಹುಶಃ ಸಾರಿಗೆ ವ್ಯವಸ್ಥೆ ಉತ್ತಮವಾಗಿ ಇಲ್ಲ ಎನ್ನುವ ದೃಷ್ಟಿಯಿಂದ ತಮಗೆ ಗೊತ್ತಿರುವ ಹಾಗೆ ಬಸ್ಸುಗಳ ಮೇಲೆ ಹೋಗತಕ್ಕಂಥಾದ್ದು, ಮೆಟಡಾರ್‌ಗಳಲ್ಲಿ ಹೋಗತಕ್ಕಂಥಾದ್ದು ಲಾರಿಗಳಲ್ಲಿ ಹೋಗತಕ್ಕಂಥಾದ್ದು ಇವೆಲ್ಲಾ ನಡೆದುಕೊಂಡು ಬಂದಿದೆ. ಇದನ್ನು ಕಡಿಮೆ ಮಾಡುವುದಕ್ಕೆ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಅನ್ನು ಇಂಪ್ರೂವ್ ಮಾಡಬೇಕು. ಅದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಎಸ್.ಎಸ್. ಪಾಟೀಲರು ಇದರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ನಾನು ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಈ ಒಂದು ಅಪಘಾತವಾದ ಸುದ್ದಿ ನನಗೆ ಬಂದ ತಕ್ಷಣ ನಾನು ಕೆ.ಎಂ. ಸಿ. ಆಸ್ಪತ್ರೆಗೆ ನಾನು ಹೋಗಿ ಅಲ್ಲಿ ಇದ್ದಂತಹ ಎಲ್ಲಾ ಗಾಯಾಳುಗಳನ್ನು ಕೂಡ ಭೇಟಿ ಮಾಡಿ ಅವರ ಶುಶ್ರೂಷೆಯ ವ್ಯವಸ್ಥೆಯನ್ನು ಮಾಡಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ರಕ್ತ ಇಲ್ಲ ಎಂದು ಡಾಕ್ಟರ್ ಹೇಳಿದರು. ನಾನು ಡಾಕ್ಟರ್‌ನ್ನು ಬೈದು ಬೇರೆ ಕಡೆಯಿಂದ ರಕ್ತವನ್ನು ತರಿಸುವಂತಹ ವ್ಯವಸ್ಥೆ ಮಾಡಿದೆ. ಮತ್ತು ಕೆಲವು ಜನ ಬ್ಲಡ್ ಡೋನರ್ಸ್ ಇದ್ದರು ಅವರನ್ನು ಕರೆಸಿ ರಕ್ತ ಕೊಡಿಸಿ ತಕ್ಷಣ ಅವರಿಗೆ ಯಾವುದೇ ರೀತಿಯ ಅಪಾಯವಾಗದಂತೆ ವ್ಯವಸ್ಥೆಯನ್ನು ಮಾಡಿದ್ದೇನೆ. ಅಪಘಾತವಾದ ಸ್ಥಳದಲ್ಲಿ ಪೋಲೀಸಿನವರು ಮತ್ತು ಸ್ಥಳೀಯ ಜನ ಸೇರಿಕೊಂಡು, ಇನ್ನೂ ಒಂದು 14-15 ಜನ ಸಾಯುವುದನ್ನು ಉಳಿಸಿದ್ದಾರೆ. ಆ ಟ್ರಕ್ ತಿರುಗಾ ಮುರುಗಾ ಆಗಿ ಬಿದ್ದಿತ್ತು. ಅಲ್ಲಿ ಇದ್ದಂತಹ ಎಲ್ಲಾ ಜನ ಸಾಯಬೇಕಾಗಿತ್ತು. ರಾಜ್ಯ ಸರ್ಕಾರದ ಯೋಜನೆ ಅಡಿಯಲ್ಲಿ ಅವರಿಗೆ ಪರಿಹಾರ ಕೊಡುವುದಕ್ಕೆ ಬರುತ್ತದೆಯೇ ಅಥವಾ ಇಲ್ಲವೇ ಎನ್ನುವ ವಿಚಾರವನ್ನು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ತಕ್ಷಣ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಸಹ ಮಾಡಿದ್ದೇನೆ.

ಉಡುಪಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಉಡುಪಿಗೆ ಓಡಾಡುತ್ತಿದ್ದ 2 ಡೀಲಕ್ಸ್ ಬಸ್ಸುಗಳನ್ನು ನಿಲ್ಲಿಸಿರುವುದು

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಅಧ್ಯಕ್ಷರೆ, 22 ವರ್ಷಗಳಿಂದ ಉಡುಪಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಉಡುಪಿಗೆ2 ಕೆ.ಎಸ್.ಆರ್.ಟಿಸಿ ಡೀಲಕ್ಸ್ ಬಸ್ಸುಗಳು ಓಡಾಡುತ್ತಿದ್ದು, 1ನೇ ತಾರೀಖಿನಿಂದ ಆ 2 ಬಸ್ಸುಗಳು ಬೆಂಗಳೂರಿಗೆ ಬರುತ್ತಿಲ್ಲ, ಬೆಂಗಳೂರಿನಿಂದ ಹೋಗುತ್ತಿಲ್ಲ. ಅನೇಕ ಸಾರ್ವಜನಿಕರು ತಮಗೆ ಬಹಳ ತೊಂದರೆಯಾಗಿದೆಯೆಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿ, ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಮಾನ್ಯ ಸಚಿವರು ಕೂಡಲೇ, ಉಡುಪಿಯಿಂದ ಆ 2 ಬಸ್ಸುಗಳನ್ನು ಓಡಿಸುವ ವ್ಯವಸ್ಥೆ ಮಾಡಬೇಕಾಗಿ ತಮ್ಮ ಮುಖೇನ ನಾನು ಅವರನ್ನು ಕೇಳುತ್ತಿದ್ದೇನೆ.